# ತಾರಸಿಯಲ್ಲೊಂದು ಕೆಂಪುತೋಟ





**ಕೆಲಸದ ಒತ್ತಡದ ಮಧ್ಯೆಯೂ ಮನೆಯ ಮೇಲಿನ ತಾರಸಿಯಲ್ಲಿ ಚೆಂದದ ಕೈತೋಟ ರೂಪಿಸುವುದರಲ್ಲಿ ಒಂದು ಸಾರ್ಥಕತೆ ಇದೆ.**

■ ಶಾಲಿನಿ, ಬೆಂಗಳೂರು
ಚಿತ್ರಗಳು: ಧರ್ಮಾನಂದ

ಬೆಂಗಳೂರಿನಲ್ಲಿರುವ ಹಲಸೂರಿನ ಆ ಮನೆಗೆ ಹೋದಾಗ ಹೀಗೊಂದು ತಾರಸಿ ತೋಟ ನೋಡಲು ಸಿಕ್ಕೀತೆಂಬ ಕಲ್ಪನೆ ಕೂಡಾ ನನಗಿರಲಿಲ್ಲ. ಬ್ಯಾಂಕ್ ಅಧಿಕಾರಿಯಾಗಿರುವ ದಯಾಕೇಶ್ವರಿ, ಹಲಸೂರಿನ ತಮ್ಮ ಮನೆಯ ತಾರಸಿಯನ್ನು ಹೂ, ಕಾಯಿಪಲ್ಲೆಗಳ ಕೈತೋಟವನ್ನಾಗಿ ಪರಿವರ್ತಿಸುವಲ್ಲಿ ವಹಿಸಿದ ಶ್ರಮ ನಿಜಕ್ಕೂ ಶ್ಲಾಘನೀಯ.

ಅವರ ಮನೆಗೆ ಹೋಗಿದ್ದಾಗ ಲೋಕಾಭಿರಾಮವಾಗಿ ಮಾತನಾಡುತ್ತಿದ್ದೆ. ಮಾತಿನ ನಡುವೆ 'ತೋಟ ನೋಡೋಣ ಬನ್ನಿ' ಎಂದು ಮಹಡಿ ಮೆಟ್ಟಿಲೇರತೊಡಗಿದರು. ತಾರಸಿಗೆ ಕಾಲಿಡುತ್ತಿದ್ದಂತೆಯೇ ಕಾವಿಬಣ್ಣದ ತೊಟ್ಟಿಗಳಲ್ಲಿ ಅರಳಿ ನಿಂತ ಬಣ್ಣಬಣ್ಣದ ಗುಲಾಬಿ, ದಾಸವಾಳ, ನಂದಿಬಟ್ಟಲು, ಸೇವಂತಿಗೆ, ದುಂಡುಮಲ್ಲಿಗೆ ನನ್ನನ್ನು ಸ್ವಾಗತಿಸಿದವು.

ಸುಮಾರು ನಲವತ್ತು ಕುಂಡಗಳ ಸುಂದರ ತೋಟ ಅದಾಗಿತ್ತು. ನಳನಳಿಸುವ ಗಿಡಗಳು, ಬಣ್ಣಬಣ್ಣದ ಹೂವುಗಳು, ಸೊಪ್ಪು, ತರಕಾರಿ, ಹಣ್ಣುಗಳು– ಏನುಂಟು ಏನಿಲ್ಲ... ಅನಿಸಿತು.

ಅವರು ದೊಡ್ಡ ದೊಡ್ಡ ಕುಂಡಗಳಲ್ಲಿ ಪೇರಳೆ, ಸಪೋಟ, ಲಿಂಬೆ, ಕಿತ್ತಳೆ,

(8ನೇ ಪುಟ ನೋಡಿ)